**ಸಾಕ್ಷಿಯನ್ನು ದಿಃ 16.12.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು ವಿದ್ಯಾಭ್ಯಾಸ ಮಾಡಿಲ್ಲ. ಇಂಗ್ಲೀಷ್ ನಲ್ಲಿ ಬರೆದಿರುವ ನನ್ನ ಪ್ರಮಾಣ ಪತ್ರವನ್ನು ಓದಿಸಿ ತಿಳಿದುಕೊಂಡಿದ್ದೇನೆ. 1 ನೇ ಪ್ರತಿವಾದಿ ನನ್ನ ದೊಡ್ಡಮ್ಮ. 2 ರಿಂದ 4 ಅಣ್ಣ ಹಾಗೂ ಅಕ್ಕತಂಗಿಯರು. ನನ್ನ ತಂದೆ ಹೆಸರು ಸಿದ್ದೇಗೌಡ. ಅವರಿಗೆ ಇಬ್ಬರು ಹೆಂಡತಿಯರು. ಮೊದಲನೇ ಪತ್ನಿ 1 ನೇ ಪ್ರತಿವಾದಿ. 2 ರಿಂದ 5 ನೇ ಪ್ರತಿವಾದಿಯರು ಅವರ ಮಕ್ಕಳು ಎಂದರೆ ಸರಿ. 1 ನೇ ಪ್ರತಿವಾದಿ ಬದುಕಿದ್ದಾರೆ. ಅವರು ಬದುಕಿರುವಾಗಲೇ ನನ್ನ ತಂದೆ 2 ನೇ ಮದುವೆಯಾಗಿದ್ದಾರೆ ಎಂದರೆ ಸರಿ. ವಾದಿಯರಾದ ನಾವು 2 ನೇ ಪತ್ನಿಯ ಮಕ್ಕಳು ಎಂದರೆ ಸರಿ. ನನ್ನ ತಂದೆ 2006 ರಲ್ಲಿ ತೀರಿದ್ದಾರೆ ಎಂದರೆ ಸರಿ. ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲೆಗಳನ್ನು ನೋಡಿದ್ದೇನೆ.

2. ಐಟಂ ನಂ. 1 ಸರ್ವೆ ನಂ. 86/1, 3 ಎಕರೆ 1 ಗುಂಟೆ ಜಮೀನನ್ನು ಮೈಸೂರು ನಗರಾಭಿವೃದ್ಧಿ ಪ್ರಾದಿಕಾರದವರು 1992 ರಲ್ಲಿ ನನ್ನ ತಂದೆ ಬದುಕಿದ್ದಾಗಲೇ ಭೂಸ್ವಾಧೀನ ಮಾಡಿಕೊಂಡಿದ್ದಾರೆ ಎಂದರೆ ಸರಿ. ಷೆಡ್ಯೂಲ್ ಬಿ ಸ್ವತ್ತನ್ನು 2004 ರಲ್ಲಿ ಭೂಸ್ವಾಧೀನ ಪಡಿಸಿಕೂಂಡಿದ್ದಾರೆ ಎಂದರೆ ಸರಿ. ಈ ಬಗ್ಗೆ ಆರ್.ಟಿ.ಸಿಯಲ್ಲಿ ನಮೂದಾಗಿದೆ ಎಂದರೆ ಸರಿ. ಸಿ ಮತ್ತು ಡಿ ಷೆಡ್ಯೂಲ್ ಆಸ್ತಿಗಳನ್ನು 2005 ರಲ್ಲಿ ಮೂಡದವರು ಭೂಸ್ವಾಧೀನ ಪಡಿಸಿಕೊಂಡಿದ್ದಾರೆ ಎಂದರೆ ಸರಿ. ಮೇಲ್ಕಂಡ ನಾಲ್ಕು ಸ್ವತ್ತುಗಳ ಭೂಸ್ವಾಧೀನ ನನ್ನ ತಂದೆ ಬದುಕಿದ್ದಾಗ ಆಗಿದೆ ಎಂದರೆ 6 ಎಕರೆ ಜಮೀನು ಭೂಸ್ವಾದೀನ ಆಗಿದೆ ಎನ್ನುತ್ತಾರೆ. ನಾನು ಹಾಜರು ಪಡಿಸಿರುವ ದಾಖಲೆಗಳಲ್ಲೆ ಒಟ್ಟು 12 ಎಕರೆ ಭೂಸ್ವಾಧೀನ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 6 ಎಕರೆ ಮಾತ್ರ ಆಗಿದೆ ಎನ್ನುತ್ತಾರೆ. ಸದರಿ ಭೂ ಸ್ವಾಧೀನದ ಪರಿಹಾರದ ಹಣವನ್ನು ನನ್ನ ತಂದೆ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಈ ಬಗ್ಗೆ ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ನಾವು ಅರ್ಜಿ ಸಲ್ಲಿಸಿದ್ದೇವೆ ಎನ್ನುತ್ತಾರೆ. ಯಾವ ನ್ಯಾಯಾಲಯದಲ್ಲಿ ಹಾಗೂ ಯಾವ ನಂಬರ್

ನಲ್ಲಿ ಅರ್ಜಿ ದಾಖಲಿಸಿದ್ದೇವೆ ಎಂದರೆ ಗೊತ್ತಿಲ್ಲ, ನನ್ನ ವಕೀಲರಿಗೆ ಗೊತ್ತಿದೆ ಎನ್ನುತ್ತಾರೆ. ಭೂ ಸ್ವಾಧೀನದ ನಂತರ ನನ್ನ ತಂದೆಯವರಿಗೆ ಸೈಟ್ ಗಳನ್ನು ನೀಡಲಾಗಿದೆ ಎಂದರೆ ಸರಿಯಲ್ಲ. ಸದರಿ ಸೈಟ್ ನಲ್ಲಿ ನನ್ನ ತಂದೆಯವರು ಅವರ ಜೀವಿತ ಅವಧಿಯಲ್ಲಿ ಬಹಳಷ್ಟು ಸೈಟ್ ಗಳನ್ನು ಮಾರಿದ್ದಾರೆ ಎಂದರೆ ಸರಿಯಲ್ಲ.

3. ಸಿದ್ದೇಗೌಡರವರ ತಂಗಿಯವರಾದ ಸಾಕಮ್ಮ, ಲಕ್ಷ್ಮಮ್ಮ, ನಿಂಗಮ್ಮ ರವರು ಅವರ ಮೇಲೆ ಪಾಲು ಕೋರಿ ದಾವೆ ಸಲ್ಲಿಸಿದ್ದರು ಎಂದರೆ ಸರಿ. ದಾವೆ ಹೆಣ್ಣು ಮಕ್ಕಳ ಪರವಾಗಿ ತೀರ್ಮಾನ ಆಗಿದೆ ಎಂದರೆ ಸರಿ. ಮೂಡದವರು ಭೂಸ್ವಾಧೀನ ಪಡಿಸಿಕೊಂಡಿರುವ ಸೈಟುಗಳನ್ನೇ ಸಿದ್ದೇಗೌಡರವರು ಅವರ ಅಕ್ಕತಂಗಿಯರಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ, ಬೇರೆ ಸೈಟುಗಳನ್ನು ಕೊಟ್ಟಿದ್ದಾರೆ ಎನ್ನುತ್ತಾರೆ. ಆ ಸೈಟ್ ಗಳ ನಂಬರ್ ಇತ್ಯಾದಿಗಳನ್ನು ಹೇಳಲಾಗುವುದಿಲ್ಲ. ಯಾವ ಸೈಟುಗಳನ್ನು ಕೊಟ್ಟಿದ್ದಾರೆ ಎಂದು ದಾಖಲೆ ಹಾಜರು ಪಡಿಸಬಹುದಾ ಎಂದರೆ 40 ವರ್ಷದ ಹಿಂದೆ ಕೊಟ್ಟಿರುವ ಕಾರಣ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಮೂಡಾದವರಿಂದ ನೀಡಿರುವ ಸೈಟುಗಳನ್ನು ಅಂತಿಮ ಡಿಕ್ರಿ ಪ್ರಕಾರ ಸಿದ್ದೇಗೌಡರವರು ಅವರ ಅಕ್ಕತಂಗಿಯರಿಗೆ ಹಂಚಿದ್ದಾರೆ ಎಂದರೆ ಸರಿಯಲ್ಲ. ದಾವೆ ಹೂಡಿದ ನಂತರವೂ ಯಾವ ಸೈಟುಗಳನ್ನು ನೀಡಿದ್ದಾರೆ ಎಂದು ನಾನು ವಿಚಾರಿಸಿಲ್ಲ. ಪ್ರತಿವಾದಿಯವರು ಏನು ತಕರಾರು ಹಾಕಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ಸಾಕ್ಷಿ ಮುಂದುವರೆದು ಪಾಲು ಕೊಡುವುದಿಲ್ಲ ಎಂದು ಹೇಳಿರುತ್ತಾರೆ.

4. ಷೆಡ್ಯೂಲ್ ಇ ಆಸ್ತಿಯ ಚೆಕ್ ಬಂಧಿ ನನಗೆ ಗೊತ್ತಿಲ್ಲ. ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವೆ ಹೂಡುವಾಗ ಚೆಕ್ ಬಂಧಿಯನ್ನು ತಂದು ಕೊಡಲು ತೊಂದರೆ ಇರಲಿಲ್ಲ ಎಂದರೆ ನನಗೆ ಗೊತ್ತಿರಲಿಲ್ಲ ಎನ್ನುತ್ತಾರೆ. ದಾವ ಇ ಸ್ವತ್ತಿನ ಇತ್ತೀಚಿನ ಆರ್.ಟಿ.ಸಿ ಕೊಡಲು ತೊಂದರೆ ಇಲ್ಲ ಎಂದರೆ ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ. ಷೆಡ್ಯೂಲ್ ಎ ನಿಂದ ಡಿ ವರೆಗಿನ ಆಸ್ತಿಗಳ ಭೂಸ್ವಾಧೀನ ನಡವಳಿಗಳನ್ನು ಮೂಡದಲ್ಲಿ ಪರೀಶಿಲಿಸಿದ್ದೀರಾ ಎಂದರೆ ನನಗೆ ಆ ಬಗ್ಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ. ಸದರಿ ನಡವಳಿಗಳ ಪ್ರಕಾರ ಸಿದ್ದೇಗೌಡರವರು ಭೂಸ್ವಾಧೀನ

ಪರಿಹಾರ ಪಡೆದು ಸೈಟುಗಳನ್ನು ಕೂಡ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಮೂಡದವರು ಸಿದ್ದೇಗೌಡರವರಿಗೆ 7238/1 ಸೈಟ್ ಅನ್ನು 2006 ರಲ್ಲಿ ಹಂಚಿಕೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದರ ಸರ್ವೇ ನಂ. 62/2 ಮತ್ತು 62/3 ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸೈಟ್ ನಂ. 7238/ಎ ಅನ್ನು ಸಹ ಸಿದ್ದೇಗೌಡರವರಿಗೆ 2006 ರಲ್ಲಿ ಹಂಚಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮೇಲ್ಕಂಡ ಎರಡು ಸೈಟುಗಳನ್ನು ಅವರು ಅವರ ಜೀವಿತ ಕಾಲದಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ ಅವರ ಜೀವಿತ ಕಾಲದಲ್ಲಿ ಷೆಡ್ಯೂಲ್ ಎ ನಿಂದ ಡಿ ರಲ್ಲಿದ ಉಳಿಕೆ ಸೈಟುಗಳನ್ನು ಅವರ ಅಕ್ಕತಂಗಿಯರಿಗೆ ಹಂಚಿಕೆ ಮಾಡಿದ್ದಾರೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಸಮಯಾವಕಾಶವನ್ನು ಕೋರಿದ್ದು ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ನೀಡಲಾಯಿತು.)

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.